**2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ**

**ಸತ್ರ ಮೊಕದ್ದಮೆ ಸಂಖ್ಯೆಃ 35/2022**

ಪಿ.ಡಬ್ಲುಃ **2** ಸಿಡಬ್ಲುಃ **2**

ಸಾಕ್ಷಿಯ ಹೆಸರು : ಕಿರಣ್ ಕುಮಾರ್

ತಂದೆ ಹೆಸರು : ಲೇಟ್ ಎಂ. ಲಕ್ಷ್ಮಣಾ

ವಯಸ್ಸು : **41** ವರ್ಷ

ವೃತ್ತಿ : ಖಾಸಗಿ ಕೆಲಸ

ವಾಸಸ್ಥಳ : ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ **20-02-2025**

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ನನಗೆ ಚಾಸಾ-**3** ಮತ್ತು **4** ರವರ ಪರಿಚಯ ಇದೆ . ಚಾಸಾ-**1** ಮತ್ತು **5** ರವರ ಪರಿಚಯ ಇದೆ . ನನಗೆ ಸಹಿ ಮಾಡಲು ಬರುತ್ತದೆ. ನಾನು ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ . ಸದರಿ ದಾಖಲೆಯು ಮೃತ ಶ್ರಾವಂತಿ ಇವಳ ಶವ ತನಿಖಾ ವರದಿಯಾಗಿದ್ದು ಅದನ್ನು ನಿಪಿ-7 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ವಿಮ್ಸ್ ಆಸ್ಪತ್ರೆ ಬಳ್ಳಾರಿಯಲ್ಲಿ ದಿಃ **22-11-2021** ರಂದು ಮಾಡಿದ್ದೆ. ಚಾಸಾ-**1** ರವರ ತಂಗಿಯ ಸಾವು ಆಗಿದ್ದ ಬಗ್ಗೆ ತಹಶೀಲ್ದಾರ್ ರವರು ನಿಪಿ-7 ರಂತೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿದ್ದರು. ನಾನು ಮೃತಳ ದೇಹವನ್ನು ನೋಡಿದ್ದೆ . ಅವಳ ಕತ್ತಿನಲ್ಲಿ ಕಲೆ ಗುರುತು ಇತ್ತು . ಅವಳು ನೇಣುಹಾಕಿಕೊಂಡು ಮರಣ ಹೊಂದಿದ್ದಳು ಎಂದು ಗೊತ್ತಾಗಿತ್ತು. ವರದಕ್ಷಿಣೆ ಕಿರುಕುಳದ ಸಂಬಂದ ಅವಳು ನೇಣುಹಾಕಿಕೊಂಡಿದ್ದಳು ಎಂದು ಗೊತ್ತಾಗಿತ್ತು . ಮಧ್ಯಾಹ್ನ **2-30** ರಿಂದ **3-30** ರ ವರೆಗೆ ಸದರಿ ಪಂಚನಾಮೆಯನ್ನು ಮಾಡಿದ್ದರು. ನನ್ನ ಜೊತೆ ಚಾಸಾ-**3** ಮತ್ತು **4** ರವರು ಸಹ ಪಂಚನಾಮೆಗೆ ಸಹಿ ಮಾಡಿದ್ದರು. ನಾನು ಈಗ ನೋಡುತ್ತಿರುವ

ಫೋಟೋಗಳಲ್ಲಿ ನಾನು , ಚಾಸಾ-3 ಮತ್ತು 4 ರವರು ಇದ್ದೇವೆ . ಸದರಿ ಫೋಟೋಗಳನ್ನು ಶವ ಪಂಚನಾಮೆಯ ಸಮಯದಲ್ಲಿ ತೆಗೆಯಲಾಗಿತ್ತು . ಅದರಲ್ಲಿ ಮೃತಳ ಶವ ಸಹ ಇದೆ . ಸದರಿ ಫೋಟೋಗಳನ್ನು ನಿಪಿ-8 ರಿಂದ 11 ಎಂದು ಗುರುತಿಸಲಾಯಿತು.

ಪಾಟೀಸವಾಲು ಆರೋಪಿ ಪರ ಶ್ರೀ ಎಂ ಎ ಬಿ ವಕೀಲರಿಂದಃ

ಪಂಚನಾಮೆಗೆ ಬರುವಂತೆ ತಹಶೀಲ್ದಾರ್ ರವರು ನನಗೆ ಯಾವುದೇ ನೋಟಿಸ್ ನ್ನು ಕೊಟ್ಟಿಲ್ಲ. ನಾನು, ಚಾಸಾ-1 ಮತ್ತು 3 ರವರು ಸ್ನೇಹಿತರು ಎಂದರೆ ಸರಿ. ನನ್ನ ಮನೆ ಮತ್ತು ಚಾಸಾ-1 ರವರ ಮನೆ ಅಕ್ಕ ಪಕ್ಕದಲ್ಲಿ ಇದ್ದವು ಎಂದರೆ ಸರಿಯಲ್ಲ. ಪಂಚನಾಮೆಯ ಯಾವ ಯಾವ ಅಂಕಣಗಳಲ್ಲಿ ಏನೇನು ಬರೆಯಲಾಗಿದೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ನಮ್ಮ ಮುಂದೆ ಬರೆದು ನನ್ನ ಸಹಿ ತೆಗೆದುಕೊಂಡಿದ್ದರು. ಟೈಪ್ ಮಾಡಿದ ಪ್ರತಿಯನ್ನು ನಮ್ಮ ಮುಂದೆ ತದದಿರಲಿಲ್ಲ ಮತ್ತು ಅದಕ್ಕೆ ನನ್ನ ಸಹಿ ಪಡೆದಿರಲಿಲ್ಲ. ನನ್ನಸಮಕ್ಷಮ ಪೊಲೀಸರು ಮೃತಳ ಶವ ಪಂಚನಾಮೆಯನ್ನು ಮಾಡದೇ ಇದ್ದರೂ ಸಹ ಮತ್ತು ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಸಹ ಚಾಸಾ-1 ರವರ ಮಾತನ್ನು ಕೇಳಿಕೊಂಡು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.